(ಶ್ರೀ ಎಸ್. ನಿಜಲಿಂಗಪ್ಪ)

ಕೊನೆಯ ನಿರ್ಧಾರವನ್ನು ತೆಗೆದುಕೊಳ್ಳುವವನಿದ್ದೇನೆ. ಈ ಬಗ್ಗೆ ಅಭಿಪ್ರಾಯ ಬಂದಾಗ ಅದು ಎಲ್ಲಿಂದ, ಯಾರಿಂದ, ಯಾವದೃಷ್ಟಿಯಿಂದ ಬಂದಿದೆ ಎನ್ನುವುದನ್ನು ಯೋಚನೆ ಮಾಡಿ ತೀರ್ಮಾನ ಮಾಡುವ ಅಧಿಕಾರ ನನಗಿದೆ. ಈಹೊತ್ತು ಯಾರನ್ನೂ ಕಡಮೆ ಮಾಡುವುದಿಲ್ಲ. ಅವಶ್ಯಕತೆ ಬಂದರೆ, ಬಂದಾಗ, ಕಡಮೆ ಮಾಡುವುದು ನನಗೆ ಬಿಟ್ಟದ್ದು. ಮಂತ್ರಿಗಳಲ್ಲಿ ಕಳವಳವುಂಟಾಗಿದೆ ಯೆಂದು ಹೇಳಿದರು; ಆದರೆ ನನ್ನ ಸಹೋದ್ಯೋಗಿಗಳಾದ ಮಂತ್ರಿಗಳಲ್ಲಿ ಯಾರಲ್ಲಿಯೂ ಕಳವಳವಿಲ್ಲ. ಯಾರ ಮುಖದಲ್ಲಿಯೂ ಕಳೆ ಹೋಗಿಲ್ಲ, ದುಗುಡವಿಲ್ಲ. ಸರ್ಕಾರದ ಕೆಲಸವೆಲ್ಲವೂ ಚೆನ್ನಾಗಿ ನಡೆಯುತ್ತಿದೆ. ಈಹೊತ್ತಿನ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡುವ ಅವಶ್ಯಕತೆ ಕಂಡುಬಂದಿಲ್ಲ.

Sri K. LAKKAPPA (Hebbur).—On a point of clarification, Sir.

Mr. SPEAKER.—There is no question of clarification.

ಶ್ರೀ ಕೆ. ಲಕ್ಕಪ್ಪ.—ಅವರು ದೆಹಲಿಯಿಂದ ಬಂದಾಗ ಖಚಿತವಾಗಿ ಮಂತ್ರಿಮಂಡಲದಲ್ಲಿ ಸಂಖ್ಯೆಯನ್ನು ಕಡಮೆ ಮಾಡುತ್ತೇನೆಂದು ಹೇಳಿದುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಖಚಿತವಾಗಿ ಅವರ ಅಭಿಪ್ರಾಯವೇನೆಂಬುದನ್ನು ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಹೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ನನಗೆ ಒಂದು ನಿಮಿಷ ಕಾಲ ಕೊಡಬೇಕು. ಈ ವಿಷಯದಲ್ಲಿ ನಾನು ಮಾತನಾಡುವುದಿಲ್ಲ; ಅವರಿಗೂ ಇದು ಗೊತ್ತಿದೆ .. ..

Mr. SPEAKER.—I have not permitted the Hon'ble Member. The Hon'ble Member Sri Krishna had asked me and I permitted him and so he raised it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಳೆಯಿಂದ ಮೊದಲೇ ಕೇಳಿಕೊಂಡು ಆಮೇಲೆ ಇಲ್ಲ ನಿಂತು ಕೊಳ್ಳುತ್ತೇನೆ. ಈಗ ಅವಕಾಶ ಕೊಟ್ಟರೆ ... ...

Mr. SPEAKER.—Hereafter the Hon'ble Member will behave properly! (*Laughter.*) He may indicate what it is and then I will see.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆ ಆಪ್ಯಾಯಮಾನವಾಗಿದೆ! ನಮ್ಮ ಸ್ನೇಹಿತರಾದ ಶ್ರೀಮಾನ್ ದೇವೇಂದ್ರಪ್ಪ ಮಂತ್ರಿಗಳಾಗಿ ಯಾವಾಗ ಪ್ರಮಾಣವಚನ ತೆಗೆದುಕೊಂಡರು? ಅವರು ಮಂತ್ರಿಗಳ ಸ್ಥಾನದಲ್ಲಿ ಕುಳಿತಿದ್ದಾರೆ. (laughter).

ಮೊನ್ನೆಯ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ಸ್ಪಷ್ಟೀಕರಣ ಮಾಡಿದರು. ಶರಾವತಿಯ ಬಗ್ಗೆ ಮುಖ್ಯಮಂತ್ರಿಗಳನ್ನು ಕಂಡೆವೆಂದು ಹೇಳಿದರು. ಆದರೆ, ಅವರು ಏನು ಹೇಳಿದರೆಂಬುದನ್ನು ಹೇಳಲಿಲ್ಲ. Judicial enquiryಯ ವಿಚಾರವನ್ನು ಅವರು ಹೇಳಿದರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಮಂತ್ರಿಮಂಡಲಕ್ಕೆ ಇನ್ನೂ ಐದು ಜನರನ್ನು ಸೇರಿಸಿಕೊಂಡರೂ ನನಗೆ ಸಂತೋಷ.

Mr. SPEAKER.—We will go to the next item.

PAPERS LAID ON THE TABLE

Sri M. V. RAMA RAO (Minister for Law).—Sri, I lay on the Table:

Order No. 2, dated 24th August 1963 (Allocation of seats in the Legislative Assembly of the States, issued by the Delimitation Commission), as required under sub-section (3) of Section 10 of the Delimitation Commission Act, 1962.

Members' Representations *re*: Breach of Privilege.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಾರ್ವಜನಿಕ ಕೆಲಸಕ್ಕಾಗಿ ಬಂದಂಥ ಮಾನ್ಯ ಸಭೆಯ ಸದಸ್ಯರೊಬ್ಬರು ಸಾರ್ವಜನಿಕ ಕೆಲಸವನ್ನು ಮಾಡತಕ್ಕ ಪವಿತ್ರ ಕರ್ತವ್ಯದಿಂದ ನಡೆಯುವ ರೊಬ್ಬರ ಹತ್ತಿರ ಹೋದಾಗ ಅವರಿಗೆ ಆದಂಥ ಅಪಮಾನದಿಂದ ಉಂಟಾದಂಥ ಪರಿಸ್ಥಿತಿಯನ್ನು...